ಓ ಎಸ್ ನಂ.**368/2013**
ಪಿಡಬ್ಲ್ಯೂ. **3**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **03.07.2024**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲು ಃ ಶ್ರೀ ಎಸ್ ಎನ್ ವಕೀಲರಿಂದಃ–

ಈ ದಾವೆಯನ್ನು ಕೃಷ್ಣಪ್ಪ ಹಾಕಿದ್ದಾರೆ. ನನಗೆ ವಾದಿಯು **50** ವರ್ಷದಿಂದ ಪರಿಚಯ. ನನಗೆ **4** ನೇ ಪ್ರತಿವಾದಿ ಗೊತ್ತು. ನಾನು ಅವನಿಗೆ ರೇಶನ್ ಕಾರ್ಡ್ ಮಾಡಿಕೊಡು ಎಂದು ಹೇಳಿದ್ದೆ. ಅವನು ರೇಶನ್ ಕಾರ್ಡನ್ನು ಮಾಡಿಕೊಡಲಿಲ್ಲ ಎಂದರೆ ಸರಿ. ಈ ಕಾರಣಕ್ಕಾಗಿ ನನ್ನ ಮತ್ತು ಅವರ ಜೊತೆ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ವಾದಿಯ ಹೆಂಡತಿ ನನ್ನ ತಂಗಿ. ದಾವಾ ಆಸ್ತಿಗಳ ಸರ್ವೆ ನಂಬರು ಮತ್ತು ಚಕ್ಕುಬಂದಿ ಗೊತ್ತಿಲ್ಲ. ನನ್ನನ್ನು ವಾದಿ ಮತ್ತು ವಾದಿಯ ಹೆಂಡತಿ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ. ವಾದಿಯ ತಂದೆಯ ಹೆಸರು ಕಾವಲಪ್ಪ ಎಂದರೆ ಸರಿಯಲ್ಲ. ವಾದಿಯನ್ನು ಕಾವಲಪ್ಪ ನವರು ಸಾಕಿದ್ದರು. ವಾದಿಯ ಶಾಲಾ ದಾಖಲಾತಿಗಳೆಲ್ಲಾ ಅವರ ತಂದೆಯ ಹೆಸರು ಕಾವಲಪ್ಪ ಎಂದು ಬರೆದಿದ್ದಾರೆ ಎಂದರೆ ಸರಿ. ವಾದಿಯು ಬೈರಗುಂಡ್ಲು ಗ್ರಾಮದಲ್ಲಿ **25–30** ವರ್ಷದಿಂದ ವಾಸವಾಗಿದ್ದಾರೆ. ವಾದಿಯು ಬೈರಗುಂಡ್ಲು ಗ್ರಾಮದಲ್ಲಿ **2** ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದಾರೆ. ಆ ಗ್ರಾಮದಲ್ಲಿ ವಾದಿಗೆ ಸ್ವಂತ ಮನೆ ಇದೆ ಎಂದರೆ ಸರಿ. ವಾದಿಯು ಬೈರಗುಂಡ್ಲು ಗ್ರಾಮದಲ್ಲಿ ವ್ಯವಸಾಯ ಮಾಡುತ್ತಾರೆ ಎಂದರೆ ಸರಿ. ಅವರಿಗೆ ಬಂದ ಆದಾಯವನ್ನು ಅವರೇ ಇಟ್ಟುಕೊಳ್ಳುತ್ತಾರೆ ಎಂದರೆ ಸಾಕ್ಷಿಯು **2** ಎಕರೆ ಜಮೀನಿನಲ್ಲಿ ಏನು ಬೆಳೆ ಬರುತ್ತದೆ ಎಂದು ಸಾಕ್ಷಿಯು ಪ್ರಶ್ನಿಸಿರುತ್ತಾರೆ.

ನಾನು ಬಿ ಚಿಕ್ಕಣ್ಣನವರನ್ನು ನೋಡಿದ್ದೇನೆ. ಅವರ ತಂದೆ ಹೆಸರು ಬೊಮ್ಮಯ್ಯ ಎಂದರೆ ಸರಿ. ಬಿ ಚಿಕ್ಕಣ್ಣನವರು ಯಾವತ್ತಿಗೂ ಕೂಡ ಬೈರಗುಂಡ್ಲು ಗ್ರಾಮದಲ್ಲಿ ವಾಸಮಾಡಿರಲಿಲ್ಲ ಕೇವಲ ಲಕ್ಕೇನಹಳ್ಳಿ ವಾಸ ಮಾಡುತ್ತಿದ್ದರುಎಂದರೆ

ಸರಿ. ಆದರೆ ಆಗಾಗ ಬೈರಗುಂಡ್ಲು ಗ್ರಾಮಕ್ಕೆ ಹೋಗಿ ಬರುತ್ತಿದ್ದರು. ಬಿ ಚಿಕ್ಕಣ್ಣನವರ ಲಕ್ಕೇನಹಳ್ಳಿಯಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ಚಿಕ್ಕಣ್ಣನವರ ಅಂತ್ಯಸಂಸ್ಕಾರವನ್ನು 1 ನೇ ಪ್ರತಿವಾದಿಯೆ ಲಕ್ಕೇನಹಳ್ಳಿಯಲ್ಲಿಯೇ ಮಾಡಿದ್ದಾರೆ ಎಂದರೆ ಸರಿ. ವಾದಿಯು ಲಕ್ಕೇನಹಳ್ಳಿಯಲ್ಲಿ ವಾಸ ಮಾಡುತ್ತಿದ್ದ ಬಗ್ಗೆ ರೇಶನ್ ಕಾರ್ಡ್ ಇತರೆ ದಾಖಲೆ ನೋಡಿಲ್ಲ.

ಪಿಡಬ್ಲ್ಯೂ–1 ರವರು ಮೊದಲಿನಿಂದಲೂ ಬೈರಗುಂಡ್ಲು ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರ ಸ್ವಂತ ಊರು ಅದೇ ಗ್ರಾಮ ಎಂದರೆ ಸರಿ. ಪಿಡಬ್ಲ್ಯೂ–1 ರವರು ಲಕ್ಕೇನಹಳ್ಳಿಯಲ್ಲಿ ವಾಸಮಾಡುತ್ತಿದ್ದ ಬಗ್ಗೆ ಯಾವುದೇ ದಾಖಲೆಯನ್ನು ನೋಡಿಲ್ಲ. 2 ನೇ ಪ್ರತಿವಾದಿಯು 1 ನೇಪ್ರತಿವಾದಿಯ ಹೆಂಡತಿ ಎಂದರೆ ಸರಿ . 2 ನೇ ಪ್ರತಿವಾದಿಯು ಕೆಲವು ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಗೊತ್ತಿಲ್ಲ . ಚಿಕ್ಕಣ್ಣ ಮೃತಪಟ್ಟ ನಂತರ ಎಲ್ಲಾ ದಾವಾ ಆಸ್ತಿಗಳನ್ನು 1 ನೇ ಪ್ರತಿವಾದಿಯೆ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಎರಡು ಬೋರ್ ವೆಲ್ ಇದೆ ಎಂದರೆ ಸರಿ. ಅದಕ್ಕೆ ವಿದ್ಯುತ್ಚಕ್ತಿಯನ್ನು 1 ನೇ ಪ್ರತಿವಾದಿಯ ಹೆಸರಿನಲ್ಲಿ ತೆಗೆದುಕೊಳ್ಳಲಾಗಿದೆ ಎಂದರೆ ಸರಿ. ಸುಮಾರು 10–15 ವರ್ಷದ ಹಿಂದೆಯೇ ಸದರಿ ಬೋರ್ ವೆಲ್ ತೆಗೆಸಲಾಗಿದೆ. ದಾವಾ ಆಸ್ತಿಗಳ ರೆವಿನ್ಯೂ ದಾಖಲೆಗಳನ್ನು ನೋಡಿಲ್ಲ. ಕೆಲವು ದಾವಾ ಆಸ್ತಿಗಳು ಜೋಡಿದಾರರ ಜಮೀನುಗಳಾಗಿದ್ದವು ಎಂದರೆ ಸರಿ. ಪ್ರಮಾಣ ಪತ್ರದಲ್ಲಿರುವ ಮಾಹಿತಿ ಗೊತ್ತಿಲ್ಲ.

ಈ ಪ್ರಮಾಣ ಪತ್ರದಲ್ಲಿ ಯಾವ ವ್ಯಾಜ್ಯ ಕಾರಣದ ತಾರೀಖು ಬರೆಸಿದ್ದಿರಾ ಎಂದರೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಏನು ವ್ಯಾಜ್ಯ ಕಾರಣ ಬರೆದಿದ್ದಾರೆಂದು ಗೊತ್ತಿಲ್ಲ. ಪ್ರಮಾಣ ಪತ್ರ ತಯಾರು ಮಾಡಲು ಮಾಹಿತಿ ಯಾರು ಕೊಟ್ಟಿದ್ದಾರೆಂದು ಗೊತ್ತಿಲ್ಲ. ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ವಾದಿಯು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಓ ಎಸ್ ನಂ.**368/2013**

ಪಿಡಬ್ಲ್ಯೂ. **3**

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶಿಲ್ಪಾ.ಹೆಚ್.ಎ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.